ಒಟ್ಟು ಪ್ರಶ್ನೆಗಳ ಸಂಖ್ಯೆ : 26 ]
Total No. of Questions : 26 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 7
[ Total No. of Printed Pages : 7

**ಸಂಕೇತ ಸಂಖ್ಯೆ : 304-K (RS)**

**Code No. : 304-K (RS)**

# ಡಿ.ಎಲ್.ಎಡ್. ಪ್ರಥಮ ವರ್ಷ

# D.El.Ed. FIRST YEAR

# ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ.)
# ಪ್ರಥಮ ಭಾಷೆ – ಕನ್ನಡ

# FACILITATING LEARNING ( LPS )
# FIRST LANGUAGE – KANNADA

**(ಪರಿಷ್ಕೃತ ಪಠ್ಯವಸ್ತು)**

**(Revised Syllabus)**

ದಿನಾಂಕ : 07. 01. 2020 ]
Date : 07. 01. 2020 ]

ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ]
Time : 10.00 A.M. to 1.00 P.M. ]

[ ಗರಿಷ್ಠ ಅಂಕಗಳು : 60
[ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

***ಸೂಚನೆಗಳು :*** i) ಪ್ರತಿ ಉತ್ತರವನ್ನು ಚಿಂತನೆ ಮಾಡಿ, ಸಂಘಟಿಸಿ ಬರೆಯಲು ಅನುಕೂಲವಾಗಬೇಕೆಂದು ಈ ಪತ್ರಿಕೆಗೆ ಉತ್ತರಿಸಲು 3 ಗಂಟೆಗಳ ಕಾಲಾವಕಾಶ ನೀಡಿದೆ.

ii) ಪ್ರತಿ ಪ್ರಶ್ನೆಗೂ ಸೂಚಿಸಿದಷ್ಟು ಉತ್ತರ ಮಾತ್ರ ಬರೆಯಿರಿ.

## ಭಾಗ – I

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ :** $10 \times 1 = 10$

1. ಗ್ರಾಂಥಿಕ ಭಾಷಾ ಕಲಿಕೆಗೆ ಸುಲಭವಾಗಿ ಲಭ್ಯವಿರುವ ದೊಡ್ಡ ಸಂಪತ್ತು

(A) ಸಂಸ್ಕೃತಿ (B) ಸಾಹಿತ್ಯ

(C) ಸಮುದಾಯ (D) ಮನೆ

2. ಕಲ್ಪನಾಶೀಲತೆಯನ್ನು ಬೆಳೆಸುವುದರೊಂದಿಗೆ ಶ್ರೀಮಂತವಾದ ಭಾಷೆಯ ಕಲಿಕೆಯನ್ನು ಅನುಕೂಲಿಸುವ ಸಾಹಿತ್ಯ ಪ್ರಕಾರ

(A) ಗಾದೆ ಮಾತು
(B) ಒಗಟುಗಳು
(C) ನುಡಿಮುತ್ತುಗಳು
(D) ಕಥೆಗಳು

3. ಮಗುವಿಗೆ ಮನೆಭಾಷೆಯಿಂದ ಶಾಲಾಭಾಷೆಗೆ ಬದಲಾಯಿಸಿಕೊಳ್ಳಲು ಅನುಕೂಲ ಮಾಡುವ ನಿಯೋಗ

(A) ಮನೆ
(B) ಸಮುದಾಯ
(C) ಶಾಲೆ
(D) ಸಮಾಜ

4. ಮನೆಭಾಷೆಯಲ್ಲಿಯೇ ಮಗು ತನ್ನ

I. ಅನುಭವಗಳನ್ನು ಪಡೆಯುತ್ತದೆ

II. ತನ್ನ ಸುತ್ತಲಿನ ಪರಿಸರಕ್ಕೆ ತೆರೆದುಕೊಳ್ಳುತ್ತದೆ

III. ತನ್ನ ಕಲಿಕೆಯನ್ನು ಕಟ್ಟಿಕೊಳ್ಳುತ್ತದೆ

*ಇವುಗಳಲ್ಲಿ :*

(A) I ಮತ್ತು II ಸರಿ
(B) III ಮತ್ತು II ಸರಿ
(C) III ಮತ್ತು I ಸರಿ
(D) ಮೇಲಿನ ಎಲ್ಲವೂ

5. ನಮ್ಮ ಮನಸ್ಸಿನಲ್ಲಿರುವ ಆಲೋಚನೆಗಳನ್ನು, ಚಿಂತನೆಗಳನ್ನು ಅನುಭವಗಳನ್ನು ಹೊರಹಾಕುವ ಸಾಧನ

I. ಓದುವುದರ ಮೂಲಕ

II. ಮಾತಿನ ಮೂಲಕ

III. ಆಲಿಸುವುದರ ಮೂಲಕ

IV. ಬರಹದ ಮೂಲಕ

*ಇವುಗಳಲ್ಲಿ :*

(A) I ಮತ್ತು IV ಸರಿ
(B) I ಮತ್ತು II ಸರಿ
(C) I ಮತ್ತು III ಸರಿ
(D) II ಮತ್ತು IV ಸರಿ

6. ಒಂದು ದೊಡ್ಡದಾದ ವಾಕ್ಯವನ್ನು ಒಮ್ಮೆ ಮಾತ್ರ ಓದಿ ಅದನ್ನು ಬರೆಯಲು ಕೊಡುವ ಚಟುವಟಿಕೆ

(A) ಪದಬಂಧ ಚಟುವಟಿಕೆ (B) ಕಾಪಿ ಬರೆಯುವುದು

(C) ಉಕ್ತಲೇಖನ (D) ಪದ್ಯ ಸಾರಾಂಶ

7. ಒಳಗೊಳ್ಳುವ ತರಗತಿಯಲ್ಲಿ ಕಂಡುಬರುವ ಪರಿಸರ

(A) ಏಕ ಭಾಷಾ ಸಾಮರ್ಥ್ಯವನ್ನು ಎಲ್ಲರೊಂದಿಗೆ ಕಲಿಯುವುದು

(B) ತನ್ನತನವನ್ನು ಕಾಪಾಡಿಕೊಂಡು ಎಲ್ಲರೊಡನೆ ಬೆರೆತು ಕಲಿಯುವುದು

(C) ಸಾಮಾನ್ಯ ಮಕ್ಕಳಿಗೂ, ನ್ಯೂನತೆ ಇರುವ ಮಕ್ಕಳಿಗೂ ಪ್ರತ್ಯೇಕವಾಗಿ ಕಲಿಸುವುದು

(D) ಕಲಿಕಾಂಶಗಳನ್ನು ಕಡ್ಡಾಯವಾಗಿ ಕಲಿಯುವಂತೆ ಶಿಸ್ತುಕ್ರಮ ಜರಗಿಸುವುದು

8. ಮಿಂಚುಪಟ್ಟಿಗಳನ್ನು ಮಕ್ಕಳ ಎದುರು ಪ್ರದರ್ಶಿಸಬೇಕಾಗಿರುವುದು

(A) ಕೆಲವು ಕ್ಷಣಗಳವರೆಗೆ

(B) ಶಿಕ್ಷಕರು ನೋಡಿಕೊಳ್ಳುವವರೆಗೆ

(C) ಇಡೀ ಪಾಠ ಮುಗಿಸುವವರೆಗೆ

(D) ಕೆಲವು ನಿಮಿಷಗಳವರೆಗೆ

9. ಶ್ರವಣದೋಷವಿರುವ ಮಕ್ಕಳಿಗೆ ಈ ಚಟುವಟಿಕೆಯ ಮೂಲಕ ಕಲಿಕೆಯನ್ನು ಅನುಕೂಲಿಸಿದರೆ ಸೂಕ್ತ

(A) ಮಕ್ಕಳು ಕೈಯಲ್ಲಿ ಮುಟ್ಟಿ ತಿಳಿದುಕೊಳ್ಳುವಂತಹ ಸಂಪನ್ಮೂಲ ಒದಗಿಸುವುದು

(B) ಕಪ್ಪುಹಲಗೆ ಬರವಣಿಗೆ ದೊಡ್ಡದಾಗಿರಬೇಕು

(C) ಮಕ್ಕಳನ್ನು ಕಲಿಕೆಗೆ ಅಗತ್ಯವಾಗಿರುವ ಶಬ್ದದ ಮೂಲದ ಬಳಿಯೇ ಕುಳ್ಳಿರಿಸುವುದು

(D) ತರಗತಿಯಲ್ಲಿ ಭೂತಗನ್ನಡಿ ವ್ಯವಸ್ಥೆ ಮಾಡುವುದು

10. ಒಳಗೊಳ್ಳುವ ಭಾಷಾ ತರಗತಿಗಳಲ್ಲಿ ಮೌಲ್ಯಮಾಪನ ಮಾಡುವಾಗ ಗಮನಿಸಬೇಕಾದ ಮುಖ್ಯ ಅಂಶ

(A) ಎಲ್ಲಾ ರೀತಿಯ ಕಲಿಕಾದಾರರಿಗೂ ಪ್ರಸ್ತುತವಾಗುವ ಕಲಿಕಾ ಸೂಚಕಗಳನ್ನು ಗುರುತಿಸುವುದು

(B) ಎಲ್ಲರನ್ನು ಒಂದೇ ಮಾನದಂಡದಿಂದ ನೋಡುವುದು

(C) ಭಿನ್ನ ಸಾಮರ್ಥ್ಯಗಳಿರುವ ಮಕ್ಕಳಿಗೆ ಮೌಲ್ಯಮಾಪನ ಮಾಡದೇ ಇರುವುದು

(D) ಮೌಖಿಕ ಹಾಗೂ ಬರವಣಿಗೆರೂಪದಲ್ಲಿ ಮೌಲ್ಯಮಾಪನ ಮಾಡುವುದು

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದು*** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $5 \times 2 = 10$

11. ಪ್ರಾಥಮಿಕ ಶಿಕ್ಷಣದ ಕುರಿತು ಯುನೆಸ್ಕೋ ಸಂಸ್ಥೆ ನೀಡಿರುವ ವ್ಯಾಖ್ಯಾನವೇನು ?

12. ಭಾಷಾ ಶಿಕ್ಷಣದಲ್ಲಿ ಸಾಹಿತ್ಯದ ಪಾತ್ರವನ್ನು ತಿಳಿಸಿ.

13. ಕಾಪಿ ಬರೆಯಲು ಆರಂಭಿಸುವ ಮೊದಲು ಗಮನಿಸಬೇಕಾದ ಅಂಶಗಳಾವುವು ?

14. ಭಾಷಾ ಶಿಕ್ಷಣದಲ್ಲಿ ಶಿಶುಸಾಹಿತ್ಯದ ಪಾತ್ರವನ್ನು ಚರ್ಚಿಸಿ.

15. ಹುಡುಕಾಟ ಕಲಿಕೆಯಾಗಿ ಬದಲಾಗುವ ಸಂದರ್ಭಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

16. ವಸ್ತು ಆಧಾರಿತ ಸಂಪನ್ಮೂಲಗಳ ಕುರಿತಾದ ಒಂದು ಮನೋನಕ್ಷೆಯನ್ನು ರಚಿಸಿ.

17. ಅಭ್ಯಾಸ ಬೋಧನೆಯ ಅವಧಿಯಲ್ಲಿ ಸ್ವಾವಲೋಕನದ ಪಾತ್ರವನ್ನು ಸಂಕ್ಷಿಪ್ತವಾಗಿ ವಿವರಿಸಿ.

18. ಕನ್ನಡ ಪಾಠಯೋಜನೆಯ ಯಾವುದಾದರೂ ನಾಲ್ಕು ಸಾಮಾನ್ಯ ಉದ್ದೇಶಗಳನ್ನು ಬರೆಯಿರಿ.

## ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ 'ಅ' ಅಥವಾ 'ಆ' ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟ ಮೀರದಂತೆ ಉತ್ತರಿಸಿ : $8 \times 5 = 40$

19. ಅ) "ಭಾಷೆ ಸಂವಹನ ಮಾಧ್ಯಮ ಆಗಿರುವುದಷ್ಟೇ ಅಲ್ಲದೆ, ವ್ಯಕ್ತಿತ್ವ ಕಟ್ಟಿಕೊಳ್ಳುವ ಸಾಧನವೂ ಹೌದು." ಈ ಮಾತನ್ನು ನಿಮ್ಮದೇ ವಾಕ್ಯದಲ್ಲಿ ಸಮರ್ಥಿಸಿ.

*ಅಥವಾ*

ಆ) ಪ್ರಾಥಮಿಕ ಹಂತದಲ್ಲಿ ಆಲಿಸುವಿಕೆ ಮತ್ತು ಮೌಖಿಕ ಅಭಿವ್ಯಕ್ತಿಯಲ್ಲಿ ಎದುರಾಗುವ ಸಮಸ್ಯೆಗಳನ್ನು ಪಟ್ಟಿ ಮಾಡಿ. ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ನೀವು ಕೈಗೊಳ್ಳುವ ಕ್ರಮಗಳು ಯಾವುವು ?

20. ಅ) ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಕಥೆ ಹೇಳಿಸಲು ನೀವು ಮಾಡಿಕೊಳ್ಳಬೇಕಾದ ಪೂರ್ವ ತಯಾರಿಗಳಲ್ಲಿ ಯಾವುದಾದರೂ ಐದು ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

*ಅಥವಾ*

ಆ) ಮನೆಭಾಷೆಯಿಂದ ಶಾಲಾಭಾಷೆಗೆ ಬದಲಾಯಿಸಿಕೊಳ್ಳುವ ಪ್ರಕ್ರಿಯೆಯನ್ನು ಉದಾಹರಣೆಯೊಂದಿಗೆ ವಿವರಿಸಿ.

21. ಅ) ಓದುವ ಕೌಶಲದ ಯಾವುದಾದರೂ ಐದು ಉಪಕೌಶಲಗಳನ್ನು ಹೆಸರಿಸಿ. ಇವುಗಳನ್ನು ನಿಮ್ಮ ತರಗತಿಯಲ್ಲಿ ಅನುಕೂಲಿಸಿದ ಚಟುವಟಿಕೆಗಳೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿ.

*ಅಥವಾ*

ಆ) "ಶಿಕ್ಷಕರು ಸಂಪನ್ಮೂಲ ವ್ಯಕ್ತಿಗಳು" ಈ ಮಾತನ್ನು ವಿಶ್ಲೇಷಿಸಿ.

22. ಅ) ಓದನ್ನು ಅನುಕೂಲಿಸುವ ಯಾವುದಾದರೂ ಐದು ಚಟುವಟಿಕೆಗಳನ್ನು ಪಟ್ಟಿ ಮಾಡಿ. ಅವುಗಳಲ್ಲಿ ಎರಡನ್ನು ಚರ್ಚಿಸಿ.

***ಅಥವಾ***

ಆ) ಗಟ್ಟಿ ಓದು ಮತ್ತು ಮೌನ ಓದು ಇವೆರಡರ ಸಾಧಕ–ಬಾಧಕಗಳನ್ನು ಚರ್ಚಿಸಿ.

23. ಅ) "ಕಾಲಕ್ಕೆ ತಕ್ಕಂತೆ ಶಿಕ್ಷಕರ ಮನೋಧೋರಣೆಗಳು ಬದಲಾಗಬೇಕು" ಈ ಹೇಳಿಕೆಯನ್ನು ಸಮರ್ಥಿಸಿ.

***ಅಥವಾ***

ಆ) "ಆಟಗಳು ಮಗುವಿನ ಸಾಕ್ಷರತೆಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪಾತ್ರವಹಿಸುತ್ತವೆ." ಈ ಮಾತನ್ನು ಸಮರ್ಥಿಸಿ.

24. ಅ) ಕಲಿಕೆಯಲ್ಲಿನ ಯಾವುದಾದರೂ ಎರಡು ಅಡೆತಡೆಗಳನ್ನು ಹೆಸರಿಸಿ. ಅವುಗಳಿಂದಾಗುವ ಸಮಸ್ಯೆಗಳನ್ನು ಮತ್ತು ಪರಿಹಾರೋಪಾಯಗಳನ್ನು ತಿಳಿಸಿ.

***ಅಥವಾ***

ಆ) ತರಗತಿಯಲ್ಲಿ ಮಕ್ಕಳ ಮತ್ತು ಶಿಕ್ಷಕರ ಮಾತನ್ನು ಸಹಜ ಸಂಪನ್ಮೂಲವಾಗಿ ಬಳಸಲು ಯಾವುದಾದರೂ ಐದು ಸಂಪನ್ಮೂಲಗಳನ್ನು ಉದಾಹರಣೆಸಹಿತ ವಿವರಿಸಿ.

25. ಅ) ಈ ಕೆಳಗಿನ ಯಾವುದಾದರೂ ಒಂದು ಘಟನೆಗೆ ಸಂಬಂಧಿಸಿದಂತೆ ಸರಳ ಸಂಭಾಷಣೆಯನ್ನು ಬರೆಯಿರಿ. ಪ್ರತಿ ಪಾತ್ರದ ಕನಿಷ್ಠ ಐದು ಸಂಭಾಷಣೆಗಳಿರಲಿ.

i) ತಡವಾಗಿ ಶಾಲೆಗೆ ಬಂದ ಮಗುವನ್ನು ಮತ್ತು ವಿಚಾರಿಸುತ್ತಿರುವ ಮುಖ್ಯ ಶಿಕ್ಷಕರು.

ii) ನಿಕಟಪೂರ್ವ ತರಬೇತಿಯಲ್ಲಿ ನಿಮ್ಮ ಮತ್ತು ಮಾರ್ಗದರ್ಶಿ ಶಿಕ್ಷಕರ ನಡುವೆ ನಡೆದ ಸಂಭಾಷಣೆ.

***ಅಥವಾ***

ಆ) ಯಾವುದಾದರೂ ಐದು ಲೇಖನ ಚಿಹ್ನೆಗಳನ್ನು ಬಳಸಿ ಪ್ರತಿ ಚಿಹ್ನೆಗೆ ಎರಡೆರಡು ವಾಕ್ಯಗಳನ್ನು ರಚಿಸಿ.

26. ಅ) ಎಲ್ಲಾ ಮಕ್ಕಳು 'ಕನ್ನಡ ಕಲಿಯಿಲು ಸಮರ್ಥರು' ಎಂಬುದನ್ನು ಗುರುತಿಸಿದ ಕನ್ನಡ ತರಗತಿಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳನ್ನು ತಿಳಿಸಿ.

***ಅಥವಾ***

ಆ) ಘಟಕಯೋಜನೆ ಎಂದರೇನು ? ಘಟಕಯೋಜನೆ ಉಪಯೋಗಗಳನ್ನು ತಿಳಿಸಿ.